**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯದಲ್ಲಿ, ತರೀಕೆರೆ.</u>**

**<u>ಸಿ.ಸಿ.1515/2023</u>**

<u>ಪಿರ್ಯಾದುದಾರರು</u> ಃ ಅಬಕಾರಿ ಪೊಲೀಸ್

-ವಿರುದ್ದ-

<u>ಆರೋಪಿ/ತರು</u> ಃ ಕೆ ಬಿ ಗಿರೀಶ

**<u>-ಃದೋಷಾರೋಪಣೆಃ-</u>**

ಶ್ರೀ ವೈದ್ಯ ಶ್ರೀಕಾಂತ್, ಬಿ.ಎಸ್ಸಿ., ಎಲ್.ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ತರೀಕೆರೆ ಆದ ನಾನು ಈ ಕೆಳಗೆ ಕಾಣಿಸಿರುವಃ

ಕೆ ಬಿ ಗಿರೀಶ್ ಬಿನ್ ಬಸವರಾಜಪ್ಪ, 32 ವರ್ಷ, ಖುಷಿ ಪ್ಯಾಮಿಲಿ ರೆಸ್ಟೋರೆಂಟ್ ಡಾಬಾ ಬಗ್ಗವಳ್ಳಿ ಗೇಟ್, ಚನ್ನಾಪುರ ಗ್ರಾಮ, ಅಜ್ಜಂಪುರ ತಾಃ

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಎಂದರೆಃ

ದಿನಾಂಕಃ15.03.2023 ರಂದು ಸಂಜೆ 5-00 ರ ಸಮಯದಲ್ಲಿ ಅಜ್ಜಂಪುರದಿಂದ ಬೀರೂರು ಕಡೆ ಹೋಗುವ ರಸ್ತೆಯ ಚನ್ನಾಪುರ ಗ್ರಾಮದ ಹತ್ತಿರ ಇರುವ ಖುಷಿ ಪ್ಯಾಮಿಲಿ ರೆಸ್ಟೋರೆಂಟ್ ಡಾಬಾದಲ್ಲಿ ಆರೋಪಿಯಾದ ನೀವು ಅಕ್ರಮವಾಗಿ ಯಾವುದೇ ಪರವಾನಗಿ ಇಲ್ಲದೇ ಒಂದು ರಟ್ಟಿನ ಪೆಟ್ಟಿಗೆ ಹಾಗೂ ಕಿಂಗ್ ಫೀಷರ್ ಸ್ಟ್ರಾಂಗ್ ಎಂಬ ರಟ್ಟಿನ ಪೆಟ್ಟಿಗೆಯಲ್ಲಿ 180 ಮಿಲಿಯ 12 ಆಫೀಸರ್ ಚಾಯ್ಸ್ ಸ್ಪೇಷಲ್ ವಿಸ್ಕಿಯ ಟೆಟ್ರಾ ಪ್ಯಾಕ್ ಗಳು, 180 ಮಿಲಿಯ 08 ಓಲ್ಡ್ ಮಂಕ್ XXX ರಮ್ ನ ಟೆಟ್ರಾ ಪ್ಯಾಕ್ ಗಳು, 180 ಮಿಲಿಯ 05 ಓಲ್ಡ್ ಅಡ್ಮಿರಲ್ ಬ್ರಾಂಡಿಯ ಟೆಟ್ರಾ ಪ್ಯಾಕ್ ಗಳು ಹಾಗೂ 180 ಮಿಲಿಯ 03 ಎಂ ಸಿ ಡೋವೆಲ್ಸ್ ಬ್ರಾಂಡಿಯ ಟೆಟ್ರಾ ಪ್ಯಾಕ್ ಗಳು ಹಾಗೂ ಕಿಂಗ್ ಫೀಷರ್ ಸ್ಟ್ರಾಂಗ್ ರಟ್ಟಿನ ಪೆಟ್ಟಿಗೆಯಲ್ಲಿ 650 ಮಿಲಿಯ 12 ಕಿಂಗ್ ಫೀಷರ್ ಸ್ಟ್ರಾಂಗ್ ಬಿಯರ್ ಬಾಟಲಿಗಳನ್ನು ಹೊಂದಿ, ಆ ಮೂಲಕ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ.**32** ರ ರೀತ್ಯಾ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿಯಾದ ನೀವು ಯಾವುದೇ ಪರವಾನಿಗೆ ಇಲ್ಲದೆ ಸದರಿ ಮದ್ಯವನ್ನು ರೆಸ್ಟೋರೆಂಟ್ ಡಾಬಾದ ಅಡುಗೆ ಕೋಣೆಯಲ್ಲಿ ದಾಸ್ತಾನು ಹೊಂದಿದ್ದು, ಆ ಮೂಲಕ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ.**38(ಎ)** ರ ರೀತ್ಯಾ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 01.10.2024

Sd/-
(ವೈದ್ಯ ಶ್ರೀಕಾಂತ್)
ಹಿ. ಪ್ರಧಾನ ಪ್ರದನ್ಯಾದಂ, ತರೀಕೆರೆ.

ಪ್ರಃ 1) ನಿಮಗೆ ತಿಳಿಯುವಂತಹ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?
ಉಃ

ಪ್ರಃ 2) ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ನಿರಾಕರಿಸುತ್ತೀರಾ?
ಉಃ

(ಆರೋಪವನ್ನು ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ನಾನೇ ಸ್ವತಃ ಬರೆದುಕೊಂಡಿರುವುದು ನಿಜ ಮತ್ತು ಸತ್ಯವಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ)
ದಿನಾಂಕಃ 01.10.2024

Sd/-
ಹಿ. ಪ್ರಧಾನ ಪ್ರ.ದ.ನ್ಯಾ.ದಂ ತರೀಕೆರೆ.

ಆರೋಪಿ/ತರ ಸಹಿಃ